**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 4585/2022 ಸಿ.ಡಬ್ಲ್ಯೂ –01 ಪಿ.ಡಬ್ಲ್ಯೂ -01

ದಿನಾಂಕಃ 06.09.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಸಾಕ್ಷಿಯು ಈಗ ನ್ಯಾಯಾಲಯದಲ್ಲಿ ಇರುವ 1 ಕೆ.ಜಿ.ಯಂತೆ 4 ಕೆ.ಜಿ ಅಕ್ಕಿಯ 4 ಸಣ್ಣ ಚೀಲಗಳನ್ನು ನೋಡಿ ಗುರುತಿಸಿದ್ದು, ಸದರಿ ಅಕ್ಕಿಯ ಚೀಲಗಳನ್ನು ಮು.ಮಾ. 1 ರಿಂದ 4 ಅಂತಾ ಗುರುತಿಸಲಾಯಿತು ಮತ್ತು ಸಾಕ್ಷಿಯು ಸದರಿ ಮು. ಮಾಲುಗಳ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ. 1-ಎ, 2-ಎ, 3-ಎ, ಮತ್ತು 4-ಎ ಅಂತಾ ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪ ಪರ ಶ್ರೀ. ಎಸ್. ಎ. ಕೆ. ವಕೀಲರಿಂದಃ-**

ನಾನು ಅಕ್ಕಿಯನ್ನು ವಶಪಡಿಸಿಕೊಂಡು ಆಹಾರ ನೀರಿಕ್ಷಕ ಅಂತಾ ಕೆಲಸ ಮಾಡುತ್ತಿದ್ದೇನು. ಸಾಮಾನ್ಯವಾಗಿ ಯಾವುದಾದರು ಅಕ್ಕಿ ಸರ್ಕಾರದಿಂದ ಸರಬರಾಜು ಆದ ಅಕ್ಕಿಯೊಂದಿಗೆ ಸೇರಿಸಿದ್ದರೆ ಅಥವಾ ಅದು ಬೇರೆ ಯಾವುದಾರು ಅಕ್ಕಿ ಆಗಿದ್ದರೆ ಅದನ್ನು ಎಫ್. ಎಸ್. ಎಲ್. ಪರೀಕ್ಷೆ ಮಾಡಿದ ನಂತರ ಸದರಿ ಅಕ್ಕಿಯು ಯಾವ ಅಕ್ಕಿ ಅಂತಾ ಹೇಳಲು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮೇಲ್ನೋಟಕ್ಕೆ ಅದು ಸರ್ಕಾರದಿಂದ ಬಿಡುಗಡೆಯಾದ ಅಕ್ಕಿ ಅಂತಾ ತಿಳಿದು ಬಂದಿರುತ್ತದೆ ಅಂತಾ ನುಡಿಯುತ್ತಾರೆ. ಸರ್ಕಾರದಿಂದ ವಿವಿಧ ಯೋಜನೆಗಳಲ್ಲಿ ಬಿಡುಗಡೆ ಆದ ಅಕ್ಕಿ ಗೋಣಿ ಚೀಲದಲ್ಲಿ ಇರುತ್ತದೆ. ನಾನು ವಶಪಡಿಸಿಕೊಂಡ ಅಕ್ಕಿಯು ವಿವಿಧ ಬಣ್ಣದ ಪ್ಲಾಸಿಕ್ ಚೀಲದಲ್ಲಿ ಇತ್ತು. ಸಾಕ್ಷಿಯು ಮುಂದುವರೆದು ಅದನ್ನು ಬೇರೆ ಚೀಲದಲ್ಲಿ ಹಾಕಿದ್ದು ಇತ್ತು ಅಂತಾ ನುಡಿಯುತ್ತಾರೆ. ನನಗೆ ಯಾವುದೆ ನ್ಯಾಯ ಬೆಲೆ ಅಂಗಡಿಯಿಂದ ಸರ್ಕಾರದ ಅಕ್ಕಿ ವಿತರಣೆ ಕಡಿಮೆ ಆದ ಬಗ್ಗೆ ಅಥವಾ ಬೇರೆಯವರಿಗೆ ಮಾರಾಟ ಮಾಡಿದ ಬಗ್ಗೆ ದೂರು ಬಂದಿರಲಿಲ್ಲ. ನಾನು ಸದರಿ ಅಕ್ಕಿಯನ್ನು ಎಲ್ಲಿಯಿಂದ ಖರೀದಿ ಮಾಡಿದ್ದರು ಅಂತಾ ವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ವಾಹನ ಚಾಲಕನು ಓಡಿ ಹೋಗಿದ್ದನು ಅಂತಾ ನುಡಿಯುತ್ತಾರೆ. ಒಟ್ಟು ಎಷ್ಟು ಚೀಲಗಳು ಇದ್ದವು ಎಂದರೆ ಸಾಕ್ಷಿಯು ನನಗೆ ಸಂಖ್ಯೆ ನೆನಪು ಇಲ್ಲ, ಆದರೆ ಒಟ್ಟು 292.05 ಕ್ವಿಂಟಲ್ ಅಕ್ಕಿ ಇತ್ತು ಅಂತಾ ನುಡಿಯುತ್ತಾರೆ. ನಾನು ಒಟ್ಟು ಎಷ್ಟು ಚೀಲಗಳು ಇತ್ತು ಅಂತಾ ಎಣಿಸಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಈಗ ನನಗೆ ನೆನಪು ಆಗುತ್ತಿಲ್ಲ ಅಂತಾ ನುಡಿಯುತ್ತಾರೆ. ಪ್ರತಿಯೊಂದು ಚೀಲದಲ್ಲಿ ಅಂದಾಜು 50 ಕೆ.ಜಿ ಅಕ್ಕಿ ಇತ್ತು. ನಾನು ಎಲ್ಲಾ ಚೀಲಗಳನ್ನು ಪರೀಕ್ಷೆ ಮಾಡಿಲ್ಲ ಆದರೆ

ಕೆಲವೊಂದು ಚೀಲಗಳನ್ನು ತೆಗೆದು ಪರೀಕ್ಷೆ ಮಾಡಿರುತ್ತೇನೆ. ನಾನು ಎಲ್ಲಾ ಚೀಲಗಳಲ್ಲಿ ಇರುವ ಅಕ್ಕಿಯನ್ನು ಸ್ಯಾಂಪಲಗಾಗಿ ತೆಗೆದಿರುವುದಿಲ್ಲ. ಸಾಕ್ಷಿಯು ಕೆಲವೊಂದು ಚೀಲಗಳಿಂದ ಅಕ್ಕಿ ತೆಗದು ಸ್ಯಾಂಪಲ್ ನೀಡಿರುತ್ತೇವೆ ಎನ್ನುತ್ತಾರೆ. ನನಗೆ ಇ.ಸಿ.ಆ್ಯಕ್ಟನ ಎಲ್ಲಾ ಕಾಯ್ದೇಗಳು ಮತ್ತು ನಿಯಮಗಳು ನನಗೆ ಗೊತ್ತು. ನಾನು ಇ.ಸಿ.ಆ್ಯಕ್ಟನ ಕಲಂ 6-ಬಿ ಯಲ್ಲಿ ತಿಳಿಸಿದ ಎಲ್ಲಾ ನಿಯಮಗಳನ್ನು ನಾನು ಪಾಲನೆ ಮಾಡಿರುತ್ತೇನೆ. ನೀವು ವಶಪಡಿಸಿಕೊಂಡ ಮಾಲುಗಳ ಮಾಲೀಕರಿಗೆ ನೋಟಿಸು ನೀಡಿದ್ದಿರಾ ಎಂದರೆ ಸಾಕ್ಷಿಯು ಚಾಲಕನು ಓಡಿ ಹೋಗಿದ್ದು, ನಾವು ಸದರಿ ವಾಹನದಲ್ಲಿ ದೊರೆತ ದಾಖಲೆಗಳ ಮೂಲಕ ದೂರನ್ನು ನೀಡಿದ್ದು ಮುಂದಿನ ತನಿಖೆಯನ್ನು ಪೋಲಿಸರು ಮತ್ತು ನಮ್ಮ ಮೇಲಾಧಿಕಾರಿಗಳು ಮಾಡಿರುತ್ತಾರೆ ಅಂತಾ ನುಡಿಯುತ್ತಾರೆ. ಯಾವುದೇ ಸರ್ಕಾರದ ಕಡೆಯಿಂದ ಬಿಡುಗಡೆ ಆದ ಧಾನ್ಯಗಳ ಬಗ್ಗೆ ಸರ್ಕಾರದ ದಾಖಲೆಗಳು ಇರುತ್ತವೆ ಎಂದರೆ ಸರಿ. ನೀವು ಸದರಿ ದಾಖಲೆಗಳ ಬಗ್ಗೆ ವಿಚಾರಣೆ ಮಾಡಿದ್ದಿರಾ ಎಂದರೆ ಸಾಕ್ಷಿಯು ನಾನು ಕೇವಲ ದೂರನ್ನು ನೀಡಿದ್ದು, ಪೋಲಿಸರು ಮತ್ತು ನಮ್ಮ ಮೇಲಾಧಿಕಾರಿಗಳು ಸದರಿ ವಿಚಾರಣೆ ಮಾಡಿರುತ್ತಾರೆ ಅಂತಾ ನುಡಿಯುತ್ತಾರೆ. ನಾನು ನನ್ನ ದೂರಿನಲ್ಲಿ ಲಾರಿಯಲ್ಲಿ ಅಕ್ಕಿಗೆ ಸಂಬಂಧಿಸಿದ ದಾಖಲೆಗಳು ದೊರೆತಿದ್ದು ಅವುಗಳನ್ನು ಪರಿಶೀಲಿಸಿದಾಗ ಅವು ಯಾದಗೀರಿ ಜಿಲ್ಲೆಯ ಗುರುಮಠಕಲ್‌ನ ಲಕ್ಷ್ಮಿತಿಮ್ಮಪ್ಪ ಸ್ವಾಮಿ ಟ್ರೇಡಿಂಗ್ ಮಾಲೀಕರಾದ ಮಣಿಕಂಠ ರಾಠೋಡ ಎನ್ನುವವರ ಹೆಸರಿನ ದಾಖಲಾತಿಗಳು ಇದ್ದವು ಅಂತಾ ನಮೂದಿಸಿದ್ದು ಸದರಿ ದಾಖಲೆಗಳನ್ನು ಪೋಲಿಸರಿಗೆ ನೀಡಿದ್ದಿರಾ ಎಂದರೆ ಸಾಕ್ಷಿಯು ನೀಡಿರುತ್ತೇನೆ ಅಂತಾ ನುಡಿಯುತ್ತಾರೆ. ನಾವು ಆಳಂದ ಚೆಕ್ ಪೋಸ್ಟ ಹತ್ತಿರ ವಾಹನವನ್ನು ನಿಲ್ಲಿಸಿದ್ದೇವು. ಸದರಿ ಸ್ಥಳದ ಚಕಬಂದಿ ಎಂದರೆ ಪೂರ್ವಕ್ಕೆ ಹೋಟಲಗಳು, ಪಶ್ಚಿಮ ಪೆಟ್ರೋಲ್ ಪಂಪ, ಉತ್ತರಕ್ಕೆ ಆಳಂದ ಉಮರ್ಗಾ ರಸ್ತೆ, ದಕ್ಷಿಣಕ್ಕೆ ಕಲಬುರಗಿ ರಸ್ತೆ ಇತ್ತು. ನಾನು ಯಾವ ಸ್ಥಳದಲ್ಲಿ ವಾಹನವನ್ನು ನಿಲ್ಲಿಸಿ ಪಂಚನಾಮೆ ಮಾಡಿದ ಬಗ್ಗೆ ಚಕಬಂದಿಯನ್ನು ನಿರ್ಧಿಷ್ಟವಾಗಿ ದಾಖಲೆಗಳಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಜಪ್ತಿ ಮಾಡಿದ ಸಮಯದಲ್ಲಿ ನಾನು, ಚಾಸಾ 2 ರಿಂದ 4 ರವರು ಇದ್ದೇವು. ನಾವು ಜಪ್ತಿ ಪಡಿಸಿಕೊಂಡ ಅಕ್ಕಿಯನ್ನು ಕೆ.ಎಪ.ಸಿ.ಎಸ್.ಸಿ ಗೊದಾಮಿನಲ್ಲಿ ಇರಿಸಿ ಸ್ವೀಕೃತಿ ಪಡೆದುಕೊಂಡಿರುತ್ತೇನೆ. ಅವರು ನೀಡಿದ ಸ್ವೀಕೃತಿಯನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ವೇಬ್ರಿಜ್‌ನಲ್ಲಿ ತೂಕ ಮಾಡಿಸಿದಾಗ ಅವರು ನೀಡಿದ ರಶೀದಿಯನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ಉಗ್ರಾಣದಲ್ಲಿ ನಾವು ಅಕ್ಕಿಯನ್ನು ಇರಿಸುವಾಗ 292 ಕ್ವಿಂಟಲ್ 50 ಕೆ. ಜಿ. ಅಕ್ಕಿ ಇತ್ತು. ನಂತರ ನಾವು ಅದರಿಂದ ಸ್ಯಾಂಪಲಗಾಗಿ ಅಕ್ಕಿಯನ್ನು ತೆಗೆದುಕೊಂಡಿರುತ್ತೇವೆ. ನಾವು ಉಗ್ರಾಣದಿಂದ ಒಟ್ಟು 292 ಕ್ವಿಂಟಲ್ 50 ಕೆ. ಜಿ. ಅಕ್ಕಿಯ ಸ್ವೀಕೃತಿಯನ್ನು ಪಡೆದಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರಲ್ಲೇ ನಾವು ಸ್ಯಾಂಪಲಗಾಗಿ ತೆಗೆದುಕೊಂಡಿರುತ್ತೇವೆ ಅಂತಾ ನುಡಿಯುತ್ತಾರೆ. ನಾವು ಜಪ್ತಿ ಪಂಚನಾಮೆ ಮಾಡುವ ಕಾಲಕ್ಕೆ ಸ್ಯಾಂಪಲಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ದೂರನ್ನು ಸಲ್ಲಿಸುವಾಗ ಜಪ್ತಿ ಪಂಚನಾಮೆ ಮತ್ತು ಸ್ಯಾಂಪಲಗಳನ್ನು ಪೋಲಿಸರಿಗೆ ನೀಡಿರುತ್ತೇನೆ. ನಾನು ವಾಹನ ಚಾಲಕ ಮತ್ತು ಅಕ್ಕಿಯ ಮಾಲೀಕರನ್ನು ವಿಚಾರಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಾಲಕನು ಓಡಿ ಹೋಗಿದ್ದು ಅಲ್ಲಿ ಯಾರು ಇರಲಿಲ್ಲ ಅಂತಾ ನುಡಿಯುತ್ತಾರೆ. ನಾನು ನಿರ್ದಿಷ್ಟವಾಗಿ ಅಕ್ಕಿಯನ್ನು ಪರೀಶಿಲನೆ ಮಾಡದೇ ಅವುಗಳನ್ನು ಸರ್ಕಾರದಿಂದ ಬಿಡುಗಡೆ ಯಾದ ಅಕ್ಕಿ ಇರುತ್ತದೆಯೋ ಇಲ್ಲವೋ ಎಂದು ತಿಳಿದುಕೊಳ್ಳದೇ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿ.14.06.2020 ರಂದು ನಾನು ಕರ್ತವ್ಯದಲ್ಲಿದ್ದಾಗ ಆಳಂದ ತಹಸೀಲ್ದಾರವರು ನನಗೆ ಕರೆ ಮಾಡಿ ಕಲಬುರಗಿಯಿಂದ ಉಮರಗಾಕ್ಕೆ ಹೋಗುವ ರಸ್ತೆಯಲ್ಲಿ ಒಂದು ಲಾರಿ ಪಡಿತರ ಚೀಟಿದಾರರಿಗೆ ವಿತರಿಸುವ ಅಕ್ಕಿಗಳನ್ನು ಕಾಳ ಸಂತೆಯಲ್ಲಿ ಕಡಿಮೆ ಬೆಲೆಗೆ ಖರೀದಿ ಮಾಡಿ ತುಂಬಿಕೊಂಡು ಅಕ್ರಮವಾಗಿ ಸಾಗಾಟಣೆ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿರುತ್ತದೆ ಎಂದು ಹೇಳಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು, ಚಾಸಾ-೪ ರವರು ತಹಸೀಲ್ದಾರವರು ಕರೆದ ಸ್ಥಳಕ್ಕೆ ಹೋದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿಂದ ಇಬ್ಬರು ಪಂಚರಾದ ಚಾಸಾ-೨ ಮತ್ತು ೩ರವರನ್ನು ಕರೆಸಿದೆವು. ಅವರಿಗೂ ಕೂಡ ಬಾತ್ಮಿ ವಿಷಯವನ್ನು ತಿಳಿಸಿದೆವು. ಅವರು ಒಪ್ಪಿದ ಮೇರೆಗೆ ಒಂದು ಖಾಸಗಿ ವಾಹನದಲ್ಲಿ ನಾನು, ಚಾಸಾ-2 ರಿಂದ 4 ರವರು ಆಳಂದ ಚೆಕಪೋಸ್ಟ ಹತ್ತಿರ ಹೋಗಿ ಸದರಿ ವಾಹನವನ್ನು ವಾಚ್ ಮಾಡುತ್ತಾ ನಿಂತಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಆಗ ವಾಹನ ನಂ. ಕೆ.ಎ.32.ಡಿ.0057 ಬಂದಿರುತ್ತದೆ, ಅದನ್ನು ಕೈ ಸನ್ನೆ ಮಾಡಿ ತಡೆದು ನಿಲ್ಲಿಸಿದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಲ್ಲಿಸಿದ ನಂತರ ಚಾಲಕನನ್ನು ವಾಹನದಲ್ಲಿ ಏನಿದೆ ಎಂದು ಕೇಳಿದೆವು ಅವನು ಅಕ್ಕಿ ಇದೆ ಎಂದು ಹೇಳಿ ಸ್ಥಳದಿಂದ ಓಡಿ ಹೋದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಾವು ಸದರಿ ಲಾರಿಗೆ ಹಾಕಿರುವ ತಾಡಪತ್ರಿಯನ್ನು ತೆಗೆದು ನೋಡಿದಾಗ ಅದರಲ್ಲಿ ವಿವಿಧ ಬಣ್ಣದ ಚೀಲಗಳಲ್ಲಿ ತುಂಬಿದ ಅಕ್ಕಿಗಳನ್ನು ನೋಡಿದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ಒಂದು ಚೀಲವನ್ನು ಉಚ್ಚಿ ನೋಡಿದಾಗ ಅದರಲ್ಲಿ ಪಡಿತರ ಚೀಟಿದಾರರಿಗೆ ವಿತರಿಸುವ ಅಕ್ಕಿಗಳು ಆಗಿದ್ದವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ವಾಹನವನ್ನು ವೇಬ್ರಿಡ್ಜಗೆ ತೆಗೆದುಕೊಂಡು ಹೋಗಿ ಕಾಟಾ ಮಾಡಿಸಿ ನೋಡಲಾಗಿ ಅದರಲ್ಲಿ 292 ಕ್ವಿಂಟಾಲ್ 50 ಕೆ.ಜಿ. ಅಕ್ಕಿಗಳು ಇದ್ದವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಅದರ ಅಂದಾಜು ಮೌಲ್ಯ 4,38,000/- ಆಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಳೆ ಬರುತ್ತಿತ್ತು, ಸುರಕ್ಷತೆಯ ದೃಷ್ಟಿಯಿಂದ ಲಾರಿಯನ್ನು ಆಳಂದ ಪೋಲಿಸ್ ಠಾಣೆಗೆ ತಂದು ನಿಲ್ಲಿಸಿದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಲಾರಿ ಮತ್ತು ಅಕ್ಕಿ ಚೀಲಗಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು ನಂತರ ಆಹಾರ ಧಾನ್ಯಗಳನ್ನು ನಮ್ಮ ಗೋಡೌನಗೆ ಸುರಕ್ಷತೆ ದೃಷ್ಟಿಯಿಂದ ಶೇಖರಣೆ ಮಾಡಿದೆವು. ಸದರಿ ಅಕ್ಕಿಗಳನ್ನು ಗೋಡೌನನಲ್ಲಿ ಹಾಕಿ ಗೋಡೌನಿನ ಮ್ಯಾನೇಜರಿಂದ ಸ್ವೀಕೃತಿಯನ್ನು ಪಡೆದುಕೊಂಡೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಖಾಲಿ ಲಾರಿಯನ್ನು ತೂಕ ಮಾಡಿ ನೋಡಲಾಗಿ 13 ಕ್ವಿಂಟಾಲ್ ಲಾರಿ ತೂಕವಿತ್ತು,

ಸದರಿ ಲಾರಿಯ ಅಂದಾಜು ಮೌಲ್ಯ ರೂ.5 ಲಕ್ಷ ಇರುತ್ತದೆ. ಸದರಿ ಲಾರಿಯನ್ನು ಚೆಕ್ ಮಾಡಿ ನೋಡಲಾಗಿ ಸದರಿ ಲಾರಿಯು ಲಕ್ಷ್ಮಿ ತಿಮ್ಮಪ್ಪ ಟ್ರೇಡಿಂಗ್ ಗುರುಮಿಠಕಲ ರವರಿಗೆ ಸಂಬಂಧಿಸಿದ ಅಕ್ಕಿ ಚೀಲಗಳು ಇದ್ದವು. ಆಗ ನಾನು ಲಕ್ಷ್ಮಿ ತಿಮ್ಮಪ್ಪ ಟ್ರೇಡಿಂಗ್ ಗುರುಮಿಠಕಲ್ ರವರ ವಿರುದ್ದ, ಓಡಿ ಹೋದ ಚಾಲಕನ ವಿರುದ್ದ ಮತ್ತು ಲಾರಿ ಮಾಲೀಕನ ವಿರುದ್ದ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಕ್ಕಿಗಳ ಪೈಕಿ ನಾಲ್ಕು ಚೀಲಗಳ ಅಕ್ಕಿಯಿಂದ ನಾಲ್ಕು ಕೆ.ಜಿ. ಅಕ್ಕಿಯನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು, ಚಾಸಾ-೨ ಮತ್ತು ೩ ರವರ ಸಮಕ್ಷಮ ಜಪ್ತಿಪಂಚನಾಮೆಯನ್ನು ಜರುಗಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ:</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ